ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ

ಸಿ.ಸಿ. ನಂಃ 30/2021

ಸಿ.ಡಬ್ಲ್ಯೂಃ 1
ಪಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರುಃ - ರೇಖಾ ನವೀನ ಜಾದವ್

ವಯಸ್ಸು - 27 ವರ್ಷ

ಉದ್ಯೋಗ - ಮನೆಕೆಲಸ

ವಾಸಸ್ಥಳ - ಕೋಣನಕೆರೆ,

ದಿನಾಂಕಃ 18-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ಈಗ ದೂರನ್ನು ತೋರಿಸಿದ್ದು ಅವರ ಸಹಿಯನ್ನು ಅವರು ಗುರುತಿಸಿದ ಮೇರೆಗೆ ಅದನ್ನು ನಿ.ಪಿ. -1 ಎಂದು ಗುರುತಿಸಲಾಯಿತು ಹಾಗೂ ಅವರ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಪ್ರತಿ ಪೇಜನಲ್ಲಿ ಪಿರ್ಯಾದಿ ಸಹಿ ಇರುತ್ತದೆ. ದಿ. 13.12.2013 ರಂದು ನಮ್ಮ ಸಂಬಂಧಿಕರಾದ ಮೊಹನರಾವ್ ಪಕ್ಕಿರಪ್ಪ ಜಾದವ್ ಒಬ್ಬನೇ ಮಗನಾದ ನವೀನ ಜಾಧವ್ ಇವರೊಂದಿಗೆ ವಿವಾಹ ಮಾಡಲು ಪರಸ್ಪರ ಹಿರಿಯರು ಒಪ್ಪಿ ನಿಶ್ಚಿಯಸಿದ್ದರು ನನ್ನ ತವರು ಮನೆಯವರು ನನ್ನ ಗಂಡನ ಮನೆಯವರಿಗೆ ವರೋಪಚಾರದಂತೆ 20 ತೋಲೆ ಚೇನಾ ರೂ. 5,00,000/- ಹಣವನ್ನು ಸುಮಾರು 2,00,000 ಕಿಮ್ಮತ್ತಿನ ಗೃಹ ಉಪಯೋಗ ಸಾಮಗ್ರಿಗಳನ್ನು ಕೊಟ್ಟು , ಶಿಗ್ಗಾಂವಿನಗರದ ಸಂಗಮ ಬಸವ ಕಾಲ್ಯಾಣ ಮಂಟಪದಲ್ಲಿ ಮದುವೆ ಮಾಡಿಕೊಟ್ಟರು. ನಮ್ಮ ಹಿಂದೂ ಜಾತಿ ಸಂಪ್ರದಾಯದ ಪ್ರಕಾರ ನಮ್ಮ ತವರು ಮನೆಯವರು ಜೋರಾಗಿ ಖರ್ಚು ಮಾಡಿ ಮದುವೆ ಮಾಡಿಕೊಟ್ಟರು. ಮದುವೆಯಾದ ನಂತರ ಗಂಡನ ಮನೆಗೆ ಬಾಳವೆ ಮಾಡಲು ಹೋದಾಗ ಗಂಡನು MBA ಓದಿದ್ದರಿಂದ ಪ್ರತಿ ದಿನ ಕೆಲಸಕ್ಕೆ ಹುಬ್ಬಳ್ಳಿಗೆ ಹೋಗಿ ಬಂದು ಮಾಡುತ್ತಿದ್ದರು. ಮದುವೆಯಾದ ನಂತರ 2 -3 ತಿಂಗಳವರಗೆ ನನ್ನ ಗಂಡ ಮತ್ತು ಅವರ ಮನೆಯವರು ನನನ್ನೂ ಚೆನ್ನಾಗಿ ನೋಡಿಕೊಂಡರು. ನನ್ನ ಗಂಡ ನೀನನ್ನೂ ಮದುವೆಯಾಗಿದ್ದು ನಿಮ್ಮ

ತಂದೆಯ ಆಸ್ತಿಗೊಸ್ಕರ ನನಗೆ ಪ್ರತಿ ದಿನ ಹೋಗಿ ಬಂದು ಕೆಲಸ ಮಾಡಲು ಆಗುತ್ತಿಲ್ಲ. ವ್ಯಾಪಾರ ಮಾಡಲು ಹಣಬೇಕಾಗಿದೆ. ಆದ್ದರಿಂದ ನೀನು ನಿಮ್ಮ ತಂದೆಯ ಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡಲು ಪ್ರಾರಂಬಿಸಿದನು. ನನಗೆ ಮತ್ತು ನನ್ನ ತವರು ಮನೆಯವರು ಬೈದಾಡುತ್ತಾ ಕಿರುಕುಳ ನೀಡಿದರು.

ನನ್ನ ಗಂಡನು ವರದಕ್ಷಿಣೆ ಕಿರುಕುಳ ನೀಡುವ ವಿಚಾರವನ್ನು ನನ್ನ ತಂದೆ ತಾಯಿಗೆ ತಿಳಿಸಿದೆ ಆಗ ಅವರು ನಮ್ಮದು ಒಟ್ಟುಕುಟುಂಬ ನಿವಮ್ಮ ಮದುವೆಯ ಸಮಯದಲ್ಲಿ ಕೊಡುವದನ್ನು ಕೊಟ್ಟಾಗ್ಗಿದೆ ಎಂದು ನನ್ನ ಗಂಡನಿಗೆ ಸಮಾಧಾನ ಹೇಳಿ ನನನ್ನು ಅವರ ಜೊತೆ ಕಳುಹಿಸಿಕೊಟ್ಟರು. ನಂತರ ಗಂಡನ ಸಹೋದರ ಮಾವನಾದ ಗಿರೀಶ ಕೃಷಣೋಜಿರಾವ್ ಜಾಧವ್, ನನ್ನ ಗಂಡ ಚಿಕ್ಕಮ್ಮರಾದ ಕಲಾವತಿ ರಾಜು ಜಾಧವ್ ಮತ್ತು ಜ್ಯೋತಿ ನಾಗರಾಜ ಜಾಧವ್ , ನನ್ನ ಗಂಡನ ಚಿಕ್ಕಪ್ಪರಾದ ರಾಜು ಜಾಧವ್ ಮತ್ತು ನಾಗರಾಜ ನಾಲವಾಡೆ, ನನ್ನ ಗಂಡನ ಚಿಕ್ಕಮ್ಮಳ ತಾಯಿ ಸುವರ್ಣಮ್ಮ ಕೃಷಣೋಜಿರಾವ್ ಜಾಧವ್ಇವೆಲ್ಲರನ್ನೂ ನನ್ನ ಗಂಡನ ಮನೆಗೆ ಕರೆಯಿಸಿಕೊಂಡು, ತಮ್ಮ ತಮ್ಮಲ್ಲಿ ಮಾತನಾಡಿಕೊಂಡು , ಒಬ್ಬರಿಗೊಬರು ಪರಸ್ಪರ ಸಂಗಾನು ಮತದಿಂದ ಹೇಗಾದರೂ ಮಾಡಿ ನನನ್ನೂ ತವರು ಮನೆ ಕಡೆ ಹೆಚ್ಚಿನ ಹಣವನ್ನು ಲಪಟಾಯಿಸಲು ಮಾತಾಡಿಕೊಂಡರು. ನಮ್ಮ ತವರು ಮನೆಯವರು ಪಂಚಾಯತಿ ಸೇರಿಸಿ, ನವೀನ MBA ಓದಿದ್ದ ಹುಡುಗ ಆತನಿಗೆ ಮದುವೆ ಸಮಯದಲ್ಲಿ ವರದಕ್ಷಿಣೆ ಕಡಿಮೇ ಕೊಟ್ಟಿದ್ದಿರಿ . ಆತನ ಬೇರೆ ಬೇರೆ ಊರಿಗೆ ಹೋಗಿ ಕೆಲಸ ಮಾಡುವುದು ಬೇಡ ನೀವೇ ಒಂದು ಉದ್ಯೋಗ್ಯ ಹಚ್ಚಿಕೊಂಡಿ ಎಂದರು. ಆಗ ನನ್ನ ತವರು ಮನೆಯರು ವಿಚಾರ ಮಾಡಿ ನನ್ನ ಮಗಳ ಭವಿಷ್ಯ ಹಾಳಾಗಬಾರದು ಎಂದು ಅಲ್ಲಿ -ಇಲ್ಲಿ ಸಾಲ ಪಡೆದುಕೊಂಡು ಸುಮಾರು ರೂ. 25,00,000 ಕೊಡಿಸಿ, ನನ್ನ ಗಂಡನ ಹೆಸರಿನಲ್ಲಿ ಶರಾವತಿ ಟ್ರೆಡರ್ಸ ಅಂಗಡಿ ಲೈಸನ್ಸ ಮಾಡಿಸಿ ವ್ಯಾಪಾರ ಮಾಡಲು ಕೊಟ್ಟರು.

ನಂತರ ನನ್ನ ಗಂಡನು 2-3 ತಿಂಗಳ ವ್ಯಾಪಾರ ಮಾಡಿದಂತೆ ನಟಿಸಿ ಮತ್ತು ಎಲ್ಲಾ ಸಂಬಂಧಿಕರು ಕೊಡಿಕೊಂಡು ನನಗೆ ಅವಾಚ್ಯ ಶಬ್ದಗಳಿಂದ ಬೈದು ಕಿರುಕಳ ನೀಡಿದ್ದರು. ನನಗೆ ಹಳ್ಳಿಯಲ್ಲಿ ವ್ಯಾಪಾರ ಮಾಡಲು ಆಗುವುದಿಲ್ಲ ನಮ್ಮ ತಂದೆಯ ಮನೆಗೆ ಹೋಗಿ ಇನ್ನೂ ರೂ. 50,00,000 ಹಣವನ್ನು ತೆಗೆದುಕೊಂಡು ಬಾ ಎಂದು ಮನೆಯಿಂದ ಹೊರಗಡೆ ಹಾಕಿದರು. ನಂತರ ನಾನು ತವರು ವಾಪಸ್ಸು ಹೋದೆ. ನಂತರ ನನ್ನ ತವರು

ಮನೆಯವರು ನನ್ನ ಗಂಡ ಮತ್ತು ಅವರ ಸಂಬಂಧಿಕರ ನಡುವಳಿಕೆಯನ್ನು ನೋಡಿ ಮನಸ್ಸಿಗೆ ನೋವು ಮಾಡಿಕೊಂಡು ಹೇಗಾದರೂ ಮಾಡಿ ಬಾಳುವೆಯನ್ನು ಸರಿ ಮಾಡಬೇಕೆಂದು ಊರಿನ ಹಿರಿಯರಾದ ಬಸವಣ್ಣಪ್ಪ ಶಿಗಟ್ಟಿ , ಶಿವಮೂರ್ತ್ಯ ಹಿರೇಮಠ, ಲಿಂಗನಗೌಡ ಪಾಟೀಲ, ಚಂದಾಪುರ, ಪರಶುರಾಮ ಹುಲಸೋಗಿ ಎಲ್ಲರೂ ಸೇರಿಕೊಂಡು , ನನ್ನ ಗಂಡನ ಚಿಕ್ಕಪ್ಪನಾದ ಮಾಹದೇವಪ್ಪ ಫಕ್ಕಿರಪ್ಪ ಮಾಸನಕಟ್ಟಿ ಇವರ ಮನೆಯಲ್ಲಿ ಪಂಚಾಯತ ಸೇರಿಸಿ ನನ್ನ ಗಂಡನಿಗೆ ಬುದ್ಧಿವಾದ ಹೇಳಿ ನನನ್ನೂ ವಾಪಸ್ಸ ಗಂಡನ ಮನೆಗೆ ಕಳುಹಿಸಿದ್ದರು.

ನನ್ನ ಗಂಡನು ಹಿರಿಯರು ಪಂಚಾಯತಿ ಮಾಡಿದ ಪ್ರಕಾರ ಮನೆಗೆ ಕರೆದುಕೊಂಡು ಹೋಗಿ ಅದೇ ದಿನ ಸಂಜೆ 5ಃ00 ಗಂಟೆಗೆ ಅತೀ ಸಿಟ್ಟಿನಿಂದ ನನಗೆ ನಿನ್ನ ತವರು ಮನೆಯರ ಮುಖಾಂತರ ಹಿರಿಯರಿಂದ ಚೀಮಾರಿ ಹಾಕಿಸಿದ, ನನ್ನ ಮರ್ಯಾದ ಕಳದೇ ನೀನ ಜೋತೆ ಬಾಳವೇ ಮಾಡುವುದಿಲ್ಲ. ನಾನು ಯಾರ ಮಾತನ್ನು ಕೇಳುವುದಿಲ್ಲ. ನೀನು ನಿನ್ನ ತಂದೆಯ ಮನೆಯಿಂದ ಹಣ ತಂದರೇ ಮಾತ್ರ ನೀನ ಜೋತೇ ಬಾಳವೇ ಮಾಡುತ್ತೇನೆ ಇಲ್ಲ ಎಂದರೆ ಇಲ್ಲ ಅಂತಾ ಹೇಳಿ ಹಿಂಸೆ ನೀಡಿ , ಬೆಂಗಳೂರಿಗೆ ಹೋದರು. ನಂತರ ನನ್ನ ಗಂಡನು 2 ತಿಂಗಳಾದರೂ ನನ್ನ ಗಂಡನ್ನು ಬರದಿದ್ದರಿಂದ, ನನ್ನ ತಂದೆಯವರು ಹಿರಿಯರನ್ನು ಕರೆದುಕೊಂಡು ಅಜ್ಜಮಪುರಕ್ಕೆ ನವೀನ ಇವರ ಸೋದರ ಮಾವನ ಮನೆಗೆ ಹೋಗಿ ಪದೇ ಹೀಗೆ ಮಾಡಬೇಡ ಒಳ್ಳೆಯ ರೀತಿಯಿಂದ ನೀನ ಹೆಂಡತಿ ಜೋತೆ ಬಾಳವೇ ಮಾಡು ಅಂತಾ ಹೇಳಿ ನನನ್ನೂ ಬಿಟ್ಟು ಬಂದರು. ನಂತರ 4-5 ದಿನ ಇಟ್ಟುಕೊಂಡು ರಾತ್ರಿ ಸಮಯದಲ್ಲಿ ನನ್ನ ಗಂಡ ಮತ್ತು ಆತನ ಸಂಬಂದಿಕರು ಸೇರಿಕೊಂಡು ನೀನು ನೋಡಲು ಚೆನ್ನಾಗಿಲ್ಲ ನೀನನ್ನೂ ನಾವು ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲ ಎಂದರು.

ಪ್ರತಿ ತಿಂಗಳು ರೂ. 1,00,000 ಹಣವನ್ನು ಕೊಟ್ಟರೇ ಮಾತ್ರ ನೀನ ಜೊತೆಯಲ್ಲಿ ಇರವಹುದು ಇಲ್ಲ ಅಂದರೇ ಇಲ್ಲ ಅಂತಾ ನನಗೆ ಹೋಡಿ-ಬಡಿ ಮಾಡಿ ಮನೆಯಿಂದ ಹೊರ ಹಾಕಿದರು. ಆಗ ನನಗೆ ಅರ್ನಿವಾಯವಾಗಿ ಅತೀ ದುಃಖದಿಂದ ಅವರಿವರ ಸಹಾಯವನ್ನು ಪಡೆದು ನಾನು ನಮ್ಮ ಊರಿಗೆ ಬಂದೇ. ನಮ್ಮೂರಿನಲ್ಲಿ ಇರುವ ಗಂಡನ ಖಾಲಿ ಮನೆಯಲ್ಲಿ ಉಳಿದ್ದು ಕೊಂಡೆ. ಅಲಿಲಂದ ಇಲಿಲಯವರೆಗೂ ನನ್ನ ಗಂಡನು ನನ್ನ ಜೊತೆ ನೋಡಿಕೊಳ್ಳಲು ನನ್ನ ಜೊತೆ ಬಾಳವೇ ಮಾಡಲು ಬಂದಿರುವುದಿಲ್ಲ. ಆತನು ಹುಬ್ಬಳ್ಳಿಯಲ್ಲಿ ವಾಸವಾಗಿರುವ ವಿಷಯ ನಮ್ಮ ತಂದೆಯವರು ಹಿರಿಯರಾದ ಮಾಹದೇವಪ್ಪ ಫಕ್ಕಿರಪ್ಪ

ಮಾಸನಕಟ್ಟಿ, ಕೃಷ್ಣಪ್ಪ ಮಾಸನಕಟ್ಟಿ, ಶಿವಾನಂದ ರಾಮಗೇರ, ಮಲೇಶಪ್ಪ ವೆಂಕೋಜಿ, ನಿಂಗನಗೌಡ ಪಾಟೀಲ, ಯಲ್ಲಪ್ಪ ಶಾಬಾಳ, ವಿಠೋಬಾ ಹುಲಸೋಗಿ, ಸುಭಾಸ ಚವ್ವಾಣ, ಇವರೆಲ್ಲರ ಸಲಹೆಮೇರೆಗೆ ಬಾಡದ ಕನಕ ಕಲ್ಯಾಣ ಮಂಟಪದಲ್ಲಿ ಪಂಚಾಯತಿ ಸೇರಿಸಿ ಅಲ್ಲಿ ನನ್ನ ಗಂಡನನ್ನು ವಿಚಾರರಿಸಿದಾಗ, ನನ್ನ ಗಂಡ ನವೀನ ಈತನು ಹುಬ್ಬಳ್ಳಿ ನಿವಾಸಿ ಶ್ರೀಮತಿ ಸೂಜಿ ಇಬ್ರಾಹಿಂ ಯಾಮಾಂತ್ರತ್ ಇವಳ ಜೋತೆ ಅನೈತಿಕ ಸಂಬಂಧ ಹೊಂದಿದ್ದು ಅವಳನ್ನು ಮದುವೆ ಮಾಡಿಕೊಂಡಿರುತ್ತೇನೆ. ಅವಳಿಗೆ ಒಂದು ಮಗು ಆಗಿದೆ ಎಂದು ಹೇಳಿದ. ಇದರ ಹಿಂದೇ ದಾವಣಗೇರೆ ಹಾಗೂ ಅಜ್ಜಮಪುರದಲ್ಲಿ ಇದೇ ರೀತಿ ಹೆಣ್ಣು ಮಕ್ಕಳಿಗೆ ಯಾಮಾರಿಸಿದ್ದು ತಿಳಿದು ಬಂದಿದೇ.

ಆಗ ಹಿರಿಯರು ನನ್ನ ಗಂಡನಿಗೆ ನೀನ ಧರ್ಮ ಪತ್ನಿಯನ್ನು ಬಿಟ್ಟು ಬೇರೆ ಯಾರ ಯಾರ ಜೋತೆ ಅನೈತಿಕ ಸಂಬಂಧ ಇಟ್ಟುಕೊಳ್ಳುವದು ಮತ್ತು ಅವರಿಗೆ ಮಕ್ಕಳು ಹುಟ್ಟಿಸಿದ್ದು ತಪ್ಪು, ಇನ್ನಾದರೂ ಬುದ್ಧಿ ಕಲಿತು ನೀನ ಹೆಂಡತಿಯೊಂದಿಗೆ ಬಾಳವೆಯನ್ನು ಮಾಡು, ಇಲ್ಲವಾದರೇ ನೀನ ಹೆಂಡತಿ ನೀನ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾಳೆ ಎಂದು ಬುದ್ದಿ ಹೇಳಿ ಕಳುಹಿಸಿದ್ದರು. ಹಿರಿಯರು ಮಾಡಿದ ಪಂಚಾಯತಿ ಪ್ರಕಾರ ನನ್ನ ಜೋತೆ ಬಾಳವೇ ಮಾಡಬಹುದೆಂದು ನಂಬಿಕೊಂಡು ಗಂಡನ ಮನೆಯಲ್ಲಿ ಇದ್ದೇನು. ದಿ. 12.05.2018 ರಂದು ನನ್ನ ಗಂಡನಾದ ನವೀನ ಈತನು ಕೋಣನಕೆರೆಗೆ ಮತ ಹಾಕಲು ಬಂದಿದ್ದು, ಆಗ ಸಂಜೆ ಸುಮಾರು 5:00 ಗಂಟೆಗೆ ಮನೆಗೆ ಬಂದು ಡೈವಸ್‌ಕೊಂಡು ಡೈವಸ್ ಪೇಪರಗೆ ಸಹಿ ಮಾಡು , ಕೋರ್ಟ ಹೇಳಿದ್ದರೂ ಸಹಿತ ನಾನು ನೀನ್ನ ಜೋತೆ ಬಾಳವೇ ಮಾಡುವುದಿಲ್ಲ. ಆಗ ನಾನು ನೀನಗೆ ಡೈವಸ್ ಕೊಡುವುದಿಲ್ಲ, ಅಂತಾ ಅಂದಿದಕ್ಕೆ, ನನಗೆ ಕೈಯಿಂದ ಕಪಾಳಕ್ಕೆ ಹೋಡೆದರು. ಆಗ ಊರಿನ ಜನರು ಬಂದು ಜಗಳ ಬಿಡಿಸಿದರು.

ಕಾರಣ ನನ್ನ ಗಂಡ ನವೀನ ಈತನು ನಾನು ಬದುಕಿರುವಾಗಲೇ ಹುಬ್ಬಳ್ಳಿಯ ಗದಗ ರಸ್ತೆ ಇಲ್ಲಿ ಇರುವ ಸೇಟ್ಟೇಟರ್ ಚರ್ಚನಲ್ಲಿ ಮತ್ತೊಂದು ಸೂಜಿ ಅಬ್ರಾಹಿಂ ಯಾಮಾರಾತ್ ಎನ್ನುವ ಮಹಿಳೆಯನ್ನು ಮದುವೆಯಾಗಿ ಅವಳ ಸಂಗಡ ಹುಬ್ಬಳ್ಳಿಯಲ್ಲಿ ದಿನ ಕಳೆಯುತ್ತಾ ನನ್ನ ಸಂಗಡ ಸರಿಯಾಗಿ ಬಾಳವೇಯನ್ನು ಮಾಡದೇ, ನನ್ನ ಬಾವನೆಗಳನ್ನು ನೀರ್ಲಕ್ಷಿಸುತ್ತಾ, ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡುತ್ತಾ ಮನೆಯಿಂದ ಆಚೆ ಹಾಕಿ, ಸಮಾಜದಲ್ಲಿ ಗಂಡ ಬಿಟ್ಟವಳು ಎನ್ನೂವ ಚುಚ್ಚು ಮಾತು ಕೇಳಿ ಜೀವನ ಸಾಕು ಎನ್ನುವ ಹಂತಕ್ಕೆ

ಬಂದಿರುತ್ತೇನೆ. ಈಗಾಲೇ 2 ಬಾರಿ ಸಾಯಲು ತೀರ್ಮಾನ ಮಾಡಿದಾಗ ನಮ್ಮ ತಂದೆ ಮತ್ತು ತಾಯಿ ನೀನು ಚಿಕ್ಕವಳು ಬಾಳಿ ಬದುಕಬೇಕಾದವಳು ಅಂತಾ ಧೈಯ ಹೇಳಿದ್ದರು. ನಾನು ಅವನ ಸಂಗಡ ಬಾಳವೇ ಮಾಡಲು ತಯಾರು ಇದ್ದರೂ ಸಹ ನನ್ನ ಗಂಡ ವಿನಾಕಾರಣ ನನ್ನ ಮೇಲೆ ಕೋರ್ಟನಲ್ಲಿ ಕೇಸ್ ಮಾಡಿದ್ದು, ಕೋರ್ಟ ಹೇಳಿದ್ದರು ಸಹ ನನನ್ನೂ ಕರೆದುಕೊಂಡು ಹೋಗದೇ ನೀರ್ಲಕ್ಷಿಸುತ್ತಿದ್ದಾರೆ. ನಾನು ಇವತ್ತಲಾ ನಾಳೇ ನನ್ನ ಗಂಡನು ಸರಿ ಹೋಗಬಹುದು ಎಂದು ಸುಮ್ಮನಿದ್ದು, ನನ್ನ ಗಂಡ ನನ್ನ ಜೋತೆ ಬಾಳುವೇ ಮಾಡುವ ಯಾವುದೇ ಲಕ್ಷಣಗಳು ಕಾಣದೇ ಇದ್ದದರಿಂದ ನಾನು ಈಗ ತಡವಾಗಿ ಬಂದು, ದೂರು ನೀಡಿದ್ದೇನೆ. ಫಿರ್ಯಾದಿ ನೀಡಿದ ಮಾರನೇ ದಿನ ಪೋಲಿಸರು ಮನೆಗೆ ಬಂದು ಜಗಳ ಎಲ್ಲಿಯಾಯಿತು ಎಂದು ನೋಡಿಕೊಂಡು ಹೋದರು. ಯಲ್ಲಪ್ಪ ಚವ್ಹಾಣ ಮತ್ತು ಮಂಜಪ್ಪರವರು ಹಾಗೂ ಪೋಲಿಸನವರು ಬಂದಿದ್ದರು ಅವರು ಸ್ಥಳ ಪಂಚನಾಮೆ ಮಾಡಿದ್ದರು. ಸಾಕ್ಷಿಗೆ ಒಂದು ಪೋಟೊ ತೋರಿಸಿದ್ದು ಅವರು ಅದನ್ನು ಗುರುತಿಸಿದ ಮೇರೆಗೆ ಸ್ಥಳ ಪಂಚನಾಮೆಯನ್ನು ನಿ.ಪಿ. -2 ಎಂದು ಗುರುತಿಸಿ ಆ ಕಾಲಕ್ಕೆ ತೆಗೆದ ಪೋಟೋವನ್ನು ನಿ.ಪಿ.-3 ಎಂದು ಗುರುತಿಸಲಾಯಿತು. ಜಗಳ ನಡೆದ ಸ್ಥಳವನ್ನು ನಾನೇ ತೋರಿಸಿದೆ. ಘಟನಾ ಸ್ಥಳದಲ್ಲಿಯೇ ಪೋಲಿಸರು ಬಂದು ಪಂಚನಾಮೆಯನ್ನು ತಯಾರಿಸಿ ಹಾತ್ ನಕಾಶೆಯನ್ನು ತಯಾರಿಸಿದ್ದರು.

<u>ಪಾಟೀ ಸವಾಲುಃ</u>

ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಜೆ. ಎಂ. ಎಫ್. ಸಿ., ಶಿಗ್ಗಾಂವ.